ವಕ್ರದೃಷ್ಟಿಯಿಂದ ಪಾರಾಗಲು ಸುಲಭದ ದಾರಿ ಅಂದರೆ ಹನುಮನ ಮೊರೆ ಹೋಗುವುದು. ಗಟ್ಟಿಯಾಗಿ ಅವನ ಪಾದ ಹಿಡಿದುಕೊಳ್ಳುವುದು. ಶಾಸ್ತ್ರಿಗಳ ಸ್ವಪ್ನದಲ್ಲಿ ಮಾರುತಿ ಕಾಣಿಸಿಕೊಂಡಿದ್ದು ತಮ್ಮನ್ನು, ತಮ್ಮೂರನ್ನು ಉದ್ಧಾರ ಮಾಡಲೆಂದೇ ಎಂದು ಕೆಲವರಿಗಾದರೂ ಬಲವಾಗಿ ಅನ್ನಿಸಿಬಿಟ್ಟಿತು. ಇಂತಹವರಲ್ಲಿ ಪಂಚಾಯ್ತಿ ಪ್ರೆಸಿಡೆಂಟರಾದ ಬೋರೇಗೌಡರದು ಅಗ್ರಪಂಕ್ತಿ. ಅಂದಮೇಲೆ ಮುಂದೆ ಹೇಳಲು ಮತ್ತೇನಿದೆ?

★★★

ದೇಣಿಗೆಯ ಪಟ್ಟಿಯಲ್ಲಿ ಗೌಡರ ಮೊದಲ ಅಂಕಿತ ಬಿತ್ತು. ಹತ್ತು ಸಾವಿರದ ಇಡುಗಂಟನ್ನು ಧಾರಾಳವಾಗಿ ಕೊಡ ಮಾಡಿದರು ಗೌಡರು. ಊರ ಜನ ಪೈಪೋಟಿಗೆ ಬಿದ್ದವರಂತೆ ಕೈಲಾದ ವಂತಿಗೆ ಕೊಟ್ಟು ಪುಣ್ಯಭಾಜನರಾದ ಸಂತೃಪ್ತಿ ಪಡೆದರು. ಪ್ರೆಸಿಡೆಂಟರ ಮುತುವರ್ಜಿಯಿಂದ ಗುಡಿ ಕಟ್ಟಲು ಸೂಕ್ತ ಸ್ಥಳವೊಂದು ಪಂಚಾಯ್ತಿಯ ಒಪ್ಪಿಗೆಯ ಮುದ್ರೆಯೊಂದಿಗೆ ಮಂಜೂರು ಮಾಡಲ್ಪಟ್ಟಿತು. ಊರಿನ ಹೊರ ಅಂಚಿಗೆ ಸೇರಿದಂತಿರುವ ಬಯಲೋ ಬಯಲಾಗಿದ್ದ ಜಾಗ. ಗುಡಿಯನ್ನು ಅಭಿವೃದ್ಧಿ ಪಡಿಸುವ ಯೋಗ ಕೂಡಿ ಬಂದರೆ ಬಳಸಿಕೊಳ್ಳಲು ಸಾಧ್ಯವಿರುವಷ್ಟು ವಿಶಾಲ ಸ್ಥಳಾವಕಾಶ. ಶಾಸ್ತ್ರೋಕ್ತವಾಗಿ ಒಂದು ಶುಭದಿನ ಶಿಲಾನ್ಯಾಸ ನಡೆದು ಗುಡಿಯ ಕಟ್ಟೋಣ ಆರಂಭವಾಗಿದ್ದೊಂದೇ ತಡ, ವರ್ಷ ಕಳೆಯುವುದರಲ್ಲಿ ದೇವಳ ಸಂಪೂರ್ಣ ಸಜ್ಜಾಗಿ ನಿಂತಿತು. ಒಂದು ಗರ್ಭಗುಡಿ. ಎದುರಿಗೆ ಐವತ್ತರವತ್ತು ಜನ ಸಲೀಸಾಗಿ ನಿಲ್ಲಬಹುದಾದ ಜಾಗ. ದೊಡ್ಡ ಮೊತ್ತ ಕೊಟ್ಟ ದಾನಿಗಳ ಹೆಸರು ಕೆತ್ತಿದ ಫಲಕವೊಂದು ಅವರವರು ಸಂದಾಯ ಮಾಡಿದ ಹಣದ ಒಕ್ಕಣೆಯೊಂದಿಗೆ ಗೋಡೆಯಲ್ಲಿ ಹೊಡೆಯಲ್ಪಟ್ಟಿತು. ದೇವಸ್ಥಾನದ ಕಟ್ಟೋಣ ಪೂರ್ಣಗೊಂಡು ಕಲಶ ಸ್ಥಾಪನೆ, ಅಷ್ಟಬಂಧ, ಪ್ರಾಣ ಪ್ರತಿಷ್ಠಾಪನೆ ಇತ್ಯಾದಿ ಕಾರ್ಯಕ್ರಮಗಳು ವಿಧಿವತ್ತಾಗಿ ನಡೆದು ಭರ್ಜರಿಯಾಗಿ ಮಾರುತಿಯ ದೇವಸ್ಥಾನ ಭಕ್ತಾದಿಗಳ ಪ್ರವೇಶಕ್ಕೆ ಮುಕ್ತವಾಯ್ತು. ಹೆಸರಾಂತ ಶಿಲ್ಪಿಯಿಂದ ಪ್ರಮಾಣಬದ್ಧವಾಗಿ ಕೆತ್ತಿಸಿದ್ದ ಆಂಜನೇಯ ಇನ್ನೇನು ಜೀವ ತಳೆದು ಬಿಡುತ್ತಾನೆ ಅನ್ನುವಷ್ಟು ಆಕರ್ಷಕವಾಗಿ ನಿಂತಿದ್ದ. ಶಾಸ್ತ್ರಿಗಳು ಹೊಸ ಜವಾಬ್ದಾರಿಗೆ ಒಲ್ಲೆನೆಂದು ಮೊದಮೊದಲು ನಿರಾಕರಿಸಿದರೂ ಮಾರುತಿ ಯಾರ ಮೂಲಕ ತನ್ನ ಅಪೇಕ್ಷೆಯನ್ನು ಜಾಹೀರುಗೊಳಿಸಿದನೋ ಅವರೇ ಮಂದಿರದ ಅರ್ಚಕರಾಗಿ ಪೂಜಾಕೈಂಕರ್ಯವನ್ನು ನಡೆಸಿಕೊಡಬೇಕೆಂದು ಒಕ್ಕೊರಲ ತೀರ್ಮಾನವಾಯ್ತು. ಭಗವಂತನಿಗೂ ಭಕ್ತಗಣಕ್ಕೂ ಮಧ್ಯವರ್ತಿಯಂತಿರುವ ಅರ್ಚಕರು ಆ ಭಗವಂತನ ಕೃಪಾಶೀರ್ವಾದಕ್ಕೆ ಪಾತ್ರರಾದವರಾಗಿದ್ದರೆ ಅವನನ್ನು ತಲುಪುವುದು ಸುಲಭ ತಾನೇ? ಹೀಗೆ ನೀಲಕಂಠಶಾಸ್ತ್ರಿಗಳೆಂಬ ಮಾಗುತ್ತಿರುವ ವಯಸ್ಸಿನ ಸಾತ್ವಿಕ ಬ್ರಾಹ್ಮಣ ಹನುಮ ದೇಗುಲದ ಅರ್ಚಕರಾಗಿ ನಿಯೋಜಿಸಲ್ಪಟ್ಟರು ಅನ್ನುವಲ್ಲಿಗೆ ಮಾರುತಿಯ ಮಹಿಮೆಯಿಂದ ಊರಿನಲ್ಲಿ ಒಂದು ಹೊಸ ಶಕೆ ಪ್ರಾರಂಭವಾಯ್ತು. ಅಲ್ಲಿಂದ, ಇಲ್ಲಿಂದ, ಸುತ್ತಮುತ್ತಲ ಊರುಗಳಿಂದ ಜನರ ಬರುವಿಕೆ ಹೆಚ್ಚಾಗುತ್ತಿದ್ದಂತೆ ಸಹಜವಾಗಿ ದೇವಳದ ಆದಾಯ ಊರ್ಜಿತಗೊಳ್ಳತೊಡಗಿತು. ಪೂಜಾಕೈಂಕರ್ಯದ ಜೊತೆ ಸೇವಾರ್ಥ ನಡೆಸುವವರ ಅಪೇಕ್ಷೆಗಳನ್ನು ಪೂರ್ಣಗೊಳಿಸುವ ಹೊಣೆಗಾರಿಕೆ ಅರ್ಚಕರ ಹೆಗಲೇರಿತು. ಅವರಿಗೆ ಕೊಡುತ್ತಿದ್ದ ಗೌರವಧನದ ಮೊತ್ತ ಏರಿಕೆಯಾಯ್ತು. 'ನಾವೇನು ಬಾಯ್ಬಿಟ್ಟು ಕೇಳೋಕೆ ಹೋಗ್ಲಿಲ್ಲ. ಆದ್ರೂ ಕೈ ತುಂಬಾ ಕೊಡ್ತಿದಾನೆ ಪರಮಾತ್ಮ. ಇರೋ ಮೂರೂಮತ್ತೊಂದು ಜನಕ್ಕೆ ಎಷ್ಟು ಬೇಕು?' ಆಗಾಗ ಸಂತೃಪ್ತಿಯಿಂದ ಉರು ಹಾಕುತ್ತಿದ್ದರು ಶಾಸ್ತ್ರಿಗಳು.



★★★

'ಮೂರೂ ಮತ್ತೊಂದು ಜನ... ಮೂರೂ ಮತ್ತೊಂದು ಜನ...' ಈ ಮಾತು ಫಣಿಯಮ್ಮನನ್ನು ಸದಾ ಕಾಲ ಶೂಲದಂತೆ ತಿವಿಯುತ್ತಿತ್ತು. ಮಗ ವಿಶ್ವೇಶ್ವರ ಅಂದರೆ ಅವರಿಗೆ ಇನ್ನಿಲ್ಲದ ಪ್ರೀತಿ.